ದಿನಾಂಕ – 17.10.2025

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಪಾಟೀ ಸವಾಲು – ಅರ್ಜಿದಾರರ ಪರ ಶ್ರೀ ಆರ್.ಬಿ. ವಕೀಲರಿಂದ –**

ಮುಖ್ಯ ವಿಚಾರಣೆಯಲ್ಲಿ ಕಾಣಿಸಿದ ಅರ್ಜಿದಾರರಿಗೆ ಸೇರಿದ ಜಮೀನಿನಲ್ಲಿ ಹಾದುಹೋಗಿರುವ 220 ಕೆವಿ ಹೈಟೆನ್ಷನ್ ಪವರ್ ಲೈನ್ ಹಿರಿಯೂರು ತಾಲ್ಲೂಕು ಬೀರನಹಳ್ಳಿ ಗ್ರಾಮದಿಂದ ಮ್ಯಾಕ್ಲೂರಹಳ್ಳಿ ಗ್ರಾಮದವರೆಗೆ ಹೋಗಿರುವುದು ಇರುತ್ತದೆ. ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರ ಮಾಲೀಕತ್ವದ ಜಮೀನಿನಲ್ಲಿ ಮೇಲೆ ಹೇಳಿದ ವಿದ್ಯುತ್ ಲೈನನ್ನು ನೀವು 2022–2023 ರಲ್ಲಿ ಎಳೆದಿರುವಿರೆಂದು ಸೂಚಿಸಲಾಗಿ, ಇಲ್ಲಾ, ಸದರಿ ಲೈನನ್ನು 2021–2022 ನೇ ಸಾಲಿನಲ್ಲಿ ನಾವುಗಳು ಎಳೆದಿರುವೆವೆಂದು ಸಾಕ್ಷಿ ಹೇಳುತ್ತಾರೆ. ಸದರಿ ಅರ್ಜಿದಾರರ ಮಾಲೀಕತ್ವದ ಜಮೀನಿನಲ್ಲಿ ಮೇಲೆ ಹೇಳಿದ ವಿದ್ಯುತ್ ಲೈನನ್ನು ನಾವು 2022 ನೇ ಸಾಲಿನ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಹಾಕಿರುತ್ತೇವೆ. ಮೇಲೆ ಹೇಳಿದ ವಿದ್ಯುತ್ ಲೈನನ್ನು ಅರ್ಜಿದಾರರ ಮಾಲೀಕತ್ವದ ಜಮೀನಿನಲ್ಲಿ 1 ಎಕರೆ ವಿಸ್ತೀರ್ಣದಲ್ಲಿ ಎಳೆಯಲಾಗಿರುವುದೆಂದು ಸೂಚಿಸಲಾಗಿ, ಇಲ್ಲಾ, 22.14 ಗುಂಟೆ ಆಸ್ತಿಯಲ್ಲಿ ಆ ಲೈನ್ ಹಾದುಹೋಗಿರುವುದು ಎಂದು ಸಾಕ್ಷಿ ಹೇಳುತ್ತಾರೆ.

2) ನಿ.ಆರ್–2 ಎಂದು ಗುರುತಿಸಿದ ದಾಖಲೆಯಲ್ಲಿ ಚಿತ್ರದುರ್ಗ ಜಿಲ್ಲಾಧಿಕಾರಿಗಳ ಆದೇಶದ ಸಂಖ್ಯೆಯನ್ನು ಕಾಣಿಸಿದ್ದು, ಸದರಿ ಆದೇಶದಲ್ಲಿ ಮೇಲೆ ಹೇಳಿದ ವಿದ್ಯುತ್ ಲೈನನ್ನು ಬೀರನಹಳ್ಳಿ ಗ್ರಾಮದಿಂದ ಮ್ಯಾಕ್ಲೂರಹಳ್ಳಿ ಗ್ರಾಮದವರೆಗೆ ನಿರ್ಮಾಣ ಮಾಡುವ ವಿಷಯವಾಗಿ ಆ ಆದೇಶದಲ್ಲಿ ನಮೂದು ಇಲ್ಲವೆಂದು ಸೂಚಿಸಲಾಗಿ, ಹೌದು, ಆದರೆ ಸದರಿ ಆದೇಶವನ್ನು ಜಿಲ್ಲಾಧಿಕಾರಿಗಳು ಹಿರಿಯೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಹೊರಡಿಸಿರುವರು ಎಂದು ಹೇಳುತ್ತಾರೆ. ನಮ್ಮ ನಿಗಮದಿಂದ ಹಾಕುವ ವಿದ್ಯುತ್ ಲೈನ್ ಯಾವ ಗ್ರಾಮದಿಂದ ಯಾವ ಗ್ರಾಮಕ್ಕೆ ಹೋಗಲಾಗಿದೆ ಎಂದು ಪ್ರತೀ ಲೈನ್ ಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಆದೇಶವನ್ನು ಜಿಲ್ಲಾಧಿಕಾರಿಗಳಿಂದ ನಾವು ಮಾಡಿಸುತ್ತೇವೆ ಎಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಆ ರೀತಿ ಪ್ರತ್ಯೇಕವಾದ ಆದೇಶವನ್ನು ಇತ್ತೀಚೆಗೆ ಮಾಡಿಸುತ್ತಿದ್ದು, ಆದರೆ ನಿ.ಆರ್–2 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣಿಸಿದ ಆದೇಶ ಆಗುವಾಗ ಆ ರೀತಿ ಪ್ರತ್ಯೇಕ ಆದೇಶ ಪಡೆಯುವ ಪದ್ದತಿ ಇರಲಿಲ್ಲವೆಂದು, ಅದರಿಂದ ಆ ವೇಳೆಗೆ ಜಿಲ್ಲಾಧಿಕಾರಿಗಳು ಪೂರ್ಣ ಹಿರಿಯೂರು ತಾಲ್ಲೂಕಿಗೆ ಎಂದು ಆದೇಶ ಮಾಡಿರುವರು

ಎಂದು ಸಾಕ್ಷಿ ಹೇಳುತ್ತಾರೆ. ನಿ.ಆರ್–3 ಎಂದು ಗುರುತಿಸಿದ ದಾಖಲೆಯ ಅಂಶಗಳನ್ನು ನೋಡಲಾಗಿ ಸದರಿ ಆದೇಶವು ಚಿತ್ರದುರ್ಗದಿಂದ ಹಿರೇಮಲ್ಲನಹೊಳೆ ಮತ್ತು ಚಿತ್ರದುರ್ಗದಿಂದ ಹಿರಿಯೂರು ಪಟ್ಟಣಕ್ಕೆ ವಿದ್ಯುತ್ ಲೈನನ್ನು ನಿರ್ಮಾಣ ಮಾಡುವ ಬಗ್ಗೆ ಮಾತ್ರ ಆಗಿರುವುದು ಕಂಡು ಬರುತ್ತಿದ್ದು, ಅದರಿಂದ ನಾವು ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರ ಮಾಲೀಕತ್ವದ ಜಮೀನಿನಲ್ಲಿ ವಿದ್ಯುತ್ ನಿರ್ಮಾಣ ಮಾಡಲು ಜಿಲ್ಲಾಧಿಕಾರಿಗಳಿಂದ ಪ್ರತ್ಯೇಕ ಆದೇಶ ಪಡೆಯದ ಕಾರಣ ನಾವು ಅರ್ಜಿದಾರರಿಗೆ ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಕೊಡಲು ಬಾಧ್ಯರು ಎಂದರೆ ಸರಿಯಲ್ಲ.

3) ಮುಖ್ಯವಿಚಾರಣೆಯ ಕಂಡಿಕೆ –2 ರಲ್ಲಿ ಅರ್ಜಿದಾರರ ಜಮೀನಿನಲ್ಲಿ ವಿದ್ಯುತ್ ಲೈನ್ ಹಾದುಹೋದ ಬಾಬ್ತು ಅರ್ಜಿದಾರರಿಗೆ ಆಸ್ತಿಯ ಅಪಮೌಲ್ಯಕ್ಕೆಂದು ಪರಿಹಾರವೆಂದು ಹಣ ನೀಡಿರುವುದಾಗಿ ಕಾಣಿಸಿದ್ದು, ಆದರೆ ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶದಲ್ಲಿ ಆ ರೀತಿ ಅಪಮೌಲ್ಯಕ್ಕೆಂದು ಪರಿಹಾರ ಕೊಡಬೇಕೆಂದು ಕಾಣಿಸಿಲ್ಲವೆಂದರೆ ಸರಿಯಲ್ಲ. ನಿ.ಆರ್–3 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಆದೇಶದಂತೆ ನಾವು ಅರ್ಜಿದಾರರಿಗೆ ಈಗಾಗಲೇ ಪರಿಹಾರವೆಂದು ಹಣವನ್ನು ಪಾವತಿಸಿರುತ್ತೇವೆ. ನಿ.ಆರ್–3 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣಿಸಿದ ಆದೇಶದಲ್ಲಿ ಯಾವ ಜಮೀನಿನಲ್ಲಿ ಪವರ್ ಲೈನ್ ಹಾದು ಹೋಗುವುದೋ ಆ ಸ್ಥಳದ ಪಂಚನಾಮೆಯನ್ನು ಮಾಡಬೇಕೆಂದು ಮತ್ತು ಲೈನ್ ಹಾದು ಹೋದ ಜಮೀನಿನ ಮಾಲೀಕರ ಭಾವಚಿತ್ರವನ್ನು ಸ್ಥಳದಲ್ಲಿಯೇ ತೆಗೆಯಬೇಕೆಂದು ಕಾಣಿಸಿದ್ದು, ಆ ರೀತಿಯ ಕ್ರಮವನ್ನು ನೀವು ಮಾಡಿರುವಿರೇ ಎಂದು ಕೇಳಲಾಗಿ, ಹೌದು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಮೇಲೆ ಹೇಳಿದಂತೆ ನಾವು ಕ್ರಮ ಕೈಗೊಂಡ ಬಗ್ಗೆ ಇರುವ ಒಂದು ದಾಖಲೆ ನಮ್ಮ ಕಛೇರಿಯಲ್ಲಿ ಇರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನೂ ತೊಂದರೆ ಇರುವುದಿಲ್ಲ. ಅರ್ಜಿದಾರರ ಜಮೀನಿನಲ್ಲಿ ಪವರ್ ಲೈನ್ ಎಳೆಯುವ ಮೊದಲು ಆ ಬಗ್ಗೆ ಅರ್ಜಿದಾರರಿಗೆ ಒಂದು ನೋಟೀಸ್ ಕೊಡಬೇಕಾಗುವುದು ಎಂದರೆ ಸರಿ. ಆ ರೀತಿ ನೋಟೀಸನ್ನು ನಾವು ಅರ್ಜಿದಾರರಿಗೆ ಕೊಟ್ಟಿರುತ್ತೇವೆ. ಆ ರೀತಿಯ ನೋಟೀಸನ್ನು ನಾವು ಅರ್ಜಿದಾರರಿಗೆ ಕೊಟ್ಟಿರುವುದಿಲ್ಲ ಮತ್ತು ಅರ್ಜಿದಾರರ ಜಮೀನಿನಲ್ಲಿ ನಾವು ಪವರ್ ಲೈನ್ ಎಳೆಯುವಾಗ ನಿಯಮದಂತೆ ಪಂಚನಾಮೆ ಮಾಡಿರುವುದಿಲ್ಲ ಮತ್ತು ನಿ.ಆರ್–3 ಎಂದು ಗುರುತಿಸಿದ ದಾಖಲೆಯಲ್ಲಿ

ಕಾಣುವ ಆದೇಶ ಅಂಶಗಳಂತೆ ನಾವು ಅರ್ಜಿದಾರರಿಗೆ ಸೂಕ್ತ ಪರಿಹಾರವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

4) ಅರ್ಜಿದಾರರ ಜಮೀನಿನಲ್ಲಿ ವಿದ್ಯುತ್ ಲೈನನ್ನು ಎಳೆಯುವಾಗ ಆ ಜಮೀನಿನಲ್ಲಿ ಆ ಲೈನ್ ಎಳೆಯಲು ಭಾರವಾದ ವಾಹನಗಳನ್ನು ಉಪಯೋಗಿಸುತ್ತೇವೆ ಎಂದರೆ ಸರಿ. ಆ ರೀತಿ ಭಾರವಾದ ವಾಹನವನ್ನು ಉಪಯೋಗಿಸುವ ಕಾರಣ, ಆ ಜಮೀನಿನಲ್ಲಿ ಇದ್ದ ಬೆಳೆನಷ್ಟ ಮತ್ತು ಆ ಜಮೀನಿಗೆ ಆದ ಹಾನಿಗೆ ಸಂಬಂಧಿಸಿದಂತೆ ಪರಿಹಾರ ಕೊಡಬೇಕೆಂದು ನಿಯಮ ಇರುವುದೆಂದರೆ ಸರಿ. ಜಮೀನಿನಲ್ಲಿ ವಿದ್ಯುತ್ ಲೈನ್ ಹಾದುಹೋಗಿರುವ ಕೆಳಭಾಗದಲ್ಲಿ ಇರುವ ಜಮೀನಿನಲ್ಲಿ 10 ಅಡಿ ಎತ್ತರದ ಬೆಳೆಗಳನ್ನು ಬೆಳೆಯಲು ಬರುವುದೆಂದು ನಾನು ಮುಖ್ಯವಿಚಾರಣೆಯಲ್ಲಿ ಕಾಣಿಸಿರುವುದು ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ವಿದ್ಯುತ್ ಲೈನ್ ನಿರ್ಮಾಣ ಮಾಡುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಆ ಲೈನ್ ಗೆ ವಿದ್ಯುತ್ ಸಂಪರ್ಕ ಕೊಡುವ ಮೊದಲು ಆ ಬಗ್ಗೆ ಒಂದು ಸಾರ್ವಜನಿಕ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ದಿಃ 19.09.2006 ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಿಸಿದ ಒಂದು ಪ್ರಕಟಣೆಯ ನಕಲು ದೃಢೀಕೃತ ಪ್ರತಿ ತೋರಿಸಿ ಅದು ನಿಮ್ಮ ಇಲಾಖೆಯಿಂದ ಪ್ರಕಟಿಸಿದ ದಾಖಲೆ ಇರುವುದೆಂದು ಸೂಚಿಸಲಾಗಿ, ಹೌದು, ನಮ್ಮ ಇಲಾಖೆಯಿಂದ ಪ್ರಕಟಣೆ ಮಾಡಿಸಿದ್ದು, ಆದರೆ ಅದು ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದು ಇರುವುದಿಲ್ಲ ಮತ್ತು ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ಹಾದುಹೋಗಿರುವ ಲೈನ್ ಗೆ ಸಂಬಂಧಿಸಿದಂತೆ ಆ ಪ್ರಕಟಣೆ ಇರುವುದಿಲ್ಲವೆಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಯು ದಾಖಲೆಯನ್ನು ಒಪ್ಪಿದ ಕಾರಣ ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

5) ನಿಪಿ-4 ಎಂದು ಗುರುತಿಸಿದ ಪ್ರಕಟಣೆಯಲ್ಲಿ ಕಾಣಿಸಿದಂತೆಯೇ ನಮ್ಮ ಪ್ರಸರಣಾ ನಿಗಮದಿಂದ ನಿರ್ಮಾಣ ಮಾಡುವ ವಿದ್ಯುತ್ ಲೈನ್ ಗೆ ಸಂಬಂಧಿಸಿದಂತೆ ನಾವು ಪತ್ರಿಕೆಯಲ್ಲಿ ಪ್ರಕಟಣೆ ಹಾಕಿಸುತ್ತೇವೆ ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ಹಾದುಹೋಗಿರುವ ಲೈನ್ ಗೆ ಸಂಬಂಧಿಸಿದಂತೆ, ಆ ಲೈನ್ ಗೆ ವಿದ್ಯುತ್ ಸಂಪರ್ಕ ಕೊಡುವ ಮೊದಲು ಆ ಬಗ್ಗೆ ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಿಸಿರುತ್ತೇವೆ. ಸದರಿ ಪತ್ರಿಕಾ ಪ್ರಕಟಣೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೇನೂ ತೊಂದರೆ ಇಲ್ಲಾ. ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರ ಜಮೀನು ಹಿರಿಯೂರು ಪಟ್ಟಣದಿಂದ ಸಮೀಪ ಇರುವುದೆಂದು

ಸೂಚಿಸಲಾಗಿ , ಇಲ್ಲಾ, 10 ಕಿಮೀ ದೂರದಲ್ಲಿ ಆ ಜಮೀನು ಇರುವುದೆಂದು ಸಾಕ್ಷಿ ಹೇಳುತ್ತಾರೆ. ನಿ.ಆರ್–3 ಎಂದು ಗುರುತಿಸಿದ ಆದೇಶವನ್ನು ಜಿಲ್ಲಾಧಿಕಾರಿಗಳು 04.12.2018 ರಂದು ಹೊರಡಿಸಿರುವುದು ಕಾಣುವುದೆಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರ ಜಮೀನಿನಲ್ಲಿ ನಾವು ವಿದ್ಯುತ್ ಲೈನನ್ನು 2021–2022 ನೇ ಸಾಲಿನಲ್ಲಿ ಹಾಕಿದ್ದು, ಆದರೆ ನಿ.ಆರ್–3 ಎಂದು ಗುರುತಿಸಿದ ಆದೇಶವು 2018 ನೇ ಸಾಲಿಗೆ ಸೇರಿದ್ದು ಮತ್ತು 2018 ನೇ ಸಾಲಿನಲ್ಲಿ ಇದ್ದ ಆಸ್ತಿಯ ಮೌಲ್ಯವು 2021–2022 ನೇ ಸಾಲಿನಲ್ಲಿ ಹೆಚ್ಚಾಗಿದ್ದು, ಅದರಿಂದ ಅರ್ಜಿದಾರರಿಗೆ ನಾವು ಪರಿಹಾರ ಕೊಡಲು ಬಾಧ್ಯರು ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರಿಗೆ ಸೇರಿದ ಜಮೀನಿನಲ್ಲಿ ವಿದ್ಯುತ್ ಲೈನನ್ನು ನಾವು ಎಳೆದ ಸಂದರ್ಭದಲ್ಲಿ ಅದರಲ್ಲಿ ಈರುಳ್ಳಿ ಬೆಳೆ ಇದ್ದು, ಅದರ ನಷ್ಟವೆಂದು ಅರ್ಜಿದಾರರಿಗೆ ಪರಿಹಾರವೆಂದು ರೂ. 86,822/– ಹಣ ಕೊಟ್ಟಿರುವೆವು ಎಂದರೆ ಸರಿ . ನಾವು ಅರ್ಜಿದಾರರಿಗೆ ನೀಡಿದ ಪರಿಹಾರದ ಹಣವು ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ಇದ್ದ ಬೆಳೆ ನಷ್ಟಕ್ಕೆಂದು ಮಾತ್ರ ಕೊಟ್ಟಿದ್ದು, ಆದರೆ ಆ ಜಮೀನಿನ ಅಪಮೌಲ್ಯಕ್ಕೆಂದು ನಾವು ಪರಿಹಾರವನ್ನು ಈವರೆವಿಗೂ ಅರ್ಜಿದಾರರಿಗೆ ಕೊಡದೇ ಇದ್ದು, ಆ ಕಾರಣ ಅರ್ಜಿಯಲ್ಲಿ ಕಾಣಿಸಿದಂತೆ ನಾವು ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಭೂ ಪರಿಹಾರವೆಂದು ನಾವು ಅರ್ಜಿದಾರರಿಗೆ ರೂ. 1,27,304/–(ಮೇಲೆ ಹೇಳಿದ ರೂ. 86,822/– ಹೊರತು ಪಡಿಸಿ) ಹಣವನ್ನು ಪ್ರತ್ಯೇಕವಾಗಿ ಕೊಟ್ಟಿರುವೆವು ಎಂದು ಹೇಳುತ್ತಾರೆ. ಸದರಿ ರೂ. 1,27,304/– ಹಣವು ಭೂಮಿಗೆ ಆದ ಹಾನಿಗೆ ಸಂಬಂಧಿಸಿದಂತೆ ನೀಡಿದ್ದು , ಆದರೆ ಈವರೆವಿಗೂ ಭೂಮಿಗೆ ಆದ ಅಪಮೌಲ್ಯದ ಬಗ್ಗೆ ನಾವು ಅರ್ಜಿದಾರರಿಗೆ ಪರಿಹಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿತ್ರದುರ್ಗ.